(685)

Founded 1917 SATYAVADI Oldest Newspaper of Mysore Daily & Weekly Reg No. M 1299

# ಸತ್ಯವಾದಿ

ಸಂಪುಟ 26 ಸಂಚಿಕೆ 422 ] ವಂಗವಾರ 13—4—1943 [ 3 ಪೈ

# ಹಿಟ್ಲರ್ ಮುಸಲೋನಿ ಮಾತುಕತೆ

ಲಂಡನ್ ಏ. 11—7 ನೇ ತಾರೀಖಿನಿಂದ 10 ನೇ ತಾರೀಖಿನವರೆಗೆ ಹಿಟ್ಲರ್ ಮುಸೆಲೋನಿ ಸಮ್ಮೇಳನ ನಡೆಸಿದರೆಂದೂ, ಎರಡು ಕಡೆಯ ಪ್ರಮುಖ ಅಧಿಕಾರಿಗಳೂ ಇದ್ದರೆಂದೂ, ಸಾಮಾನ್ಯ ರಾಜಕೀಯ ವಿಚಾರ ಮತ್ತು ರಾಜತಂತ್ರ ವಿಚಾರವಾ ಎಲ್ಲಾ ವಿಷಯಗಳ ಬಗ್ಗೆ ನಡೆಯಿಸಲಾಯಿತೆಂದೂ, ಹಿಟ್ಲರ್ ಮುಸಲೋನಿಗಳಿಬ್ಬರೂ ಯುದ್ಧ ಮುಂದುಪರಿಸಿ ತಮ್ಮ ಆಡಳಿತಗಳಿಗೊಳಪಟ್ಟ ಕಡೆಗಳಲ್ಲೆಲ್ಲಾ ಸೈನ್ಯ ಜಮಾವಣೆ ಮಾಡುವದರಲ್ಲಿ ನಿರ್ಧಾರವನ್ನು ವ್ಯಕ್ತ ಪಡಿಸಿದರೆಂದೂ, ಮಾತುಕತೆಗಳು ಬಹು ವಿಶ್ವಾಸ ಮತ್ತು ಸಹೃದಯದಿಂದ ನಡೆಯಿತೆಂದೂ ಜರ್ಮನ್ ನ್ಯೂಸ್ ಏಜೆನ್ಸಿ ಪ್ರಕಟಿಸಿದೆ

## ಜುಂಕಿಂಗ್ ಹಾಳೇ !

ಜುಂಕಿಂಗ್ ನಗರವು ಮತ್ತೆ ಶಿವಾನ ಧಾಳಿಗೆ ತುತ್ತಾಗುವ ಬೆಂತು ಪ್ರಾರಂಭವಾಗಿದೆ. ಹೋದ ಭಾನುವಾರ ಧಾಳಿಯಾಯಿತು. ಈ ನಗರಕ್ಕೆ 1939 ನೇ ಜೂನಿಗೆಯಲ್ಲಿ ಧಾಳಿ ಆರಂಭಿಸಿದ್ದು ಇದುವರೆಗೆ ನಡೆಯುತ್ತಲೇ ಇದೆ. ಈ ಕಾಲದಲ್ಲಿ ಒಂದು ದಿವಸ 250 ವಿಮಾನಗಳು ವಿಕ ಕಾಲದಲ್ಲಿ ಒಂದಿನ್ನುವು. ಶೇಕಡ 7 ರಂತೆ ನಗರವು ಹಾಳಾಗಿದೆ. ಆದರೆ ಇದೇ ರಾಜಧಾನಿ. ಇನ್ನೂ ಎದೆಗುಂದದೆ ಯುದ್ಧ ನಡೆಸುತ್ತಲೇ ಇದೆ. ರಾಜಧಾನಿಯಾದ ಜುಂಕಿಂಗಿನಲ್ಲಿ ಇಲ್ಲಿಯ ಹಾಗೆ ಸೈರನ್ ಕೂಗಿಸುವುದಿಲ್ಲ. ವಿಮಾನ ಧಾಳಿಯ ಸೂಚನೆ ಕಂಡ ಕೂಡಲೇ ಎರಡು ಪ್ರಕಾಶವಾದ ಬೆಲೂನುಗಳನ್ನು ಹಾರಿಸುವರು. ಶತ್ರುಗಳ ವಿಮಾನಗಳು ಮಾಯವಾದನಂತರ ಎರಡು ಹಸಿರು ಬಲೂನನ್ನು ಕೆಳಗಡೆ ಕಟ್ಟುವರು.

## ಮಿತ್ರಪಕ್ಷದವರಿಗೆ ಹೊಸ ಶಕ್ತಿ

ಅಸ್ಸಾಮಿನಲ್ಲಿ ಮಿತ್ರಮಂಡಲಿಗೆ ಹೊಸ ಶಕ್ತಿಯು ಉದ್ಭವವಾಗಿದೆ ಇದು ಸೊಳ್ಳೆ. ಸೈನಿಕರೆಲ್ಲರಿಗೂ ಒಂದು ಡಬ್ಬದಲ್ಲಿ ಮುಲಾಮನ್ನು ಹಾಕಿ ಕೊಟ್ಟಿರುವರು. ಸಾಯಂಕಾಲ ಸೂರ್ಯಾಸ್ತಮಕ್ಕೆ ಅರ್ಧ ಗಂಟೆ ಮುಂಚೆ ಸೈನಿಕರೆಲ್ಲಾ ಒಟ್ಟಿಗೂಡಬೇಕು. ಸೇನಾಧಿಪತಿಯು ಆಜ್ಞೆ ಮಾಡಿದ ಕೂಡಲೇ ಪ್ರತ್ಯೇಕವಾಗಿ ತೆಗೆದು ಹಿಡಿದುಕೊಳ್ಳುವರು. ನಂತರ ಒಂದೊಂದು ಆಜ್ಞೆಯಾದಂತೆಲ್ಲಾ ಮುಖಕ್ಕೆ, ಕೊರಳಿಗೆ ಪಾದಗಳಿಗೆ ಹೀಗೆ ಎಲ್ಲಾ ಕಡೆ ಬಳೆದುಕೊಳ್ಳುತ್ತಾರೆ. ಎರಡೆಕ್ಕೊಂದು ದಿವಸ ಸೊಳ್ಳೆ ಹೊಟ್ಟೆ ಇಡುವ ಸ್ಥಳ, ಹಳ್ಳಕೊಳ್ಳಗಳಲ್ಲಿರುವ ಸೊಳ್ಳೆಗಳು ಇವನ್ನೆಲ್ಲಾ ನಿರ್ಮೂಲ ಮಾಡುವರು.

---

ಲಂಡನ್—ಏ. 12—ಎಲ್ಲಾ ಆಕ್ರಮಿತ ಪ್ರದೇಶಗಳಲ್ಲಿ ವಿಮಾನ ಕೊಡೆಯಿಂದ ಹೆಂಗಸು ವ್ಯವಸಾಯಗಾರರು ಮತ್ತು ಯುವಕರನ್ನು ಬಿಡುತ್ತಿರುವರು. ಇವರು ಊರೆಲ್ಲಾ ಅಲೆದು, ತಮ್ಮ ದೇಶಹಿತಕರವಾದ ಕಾರ್ಯಗಳನ್ನು ನಡೆಸುತ್ತಿರುವರು.

# ವರ್ತಮಾನ

ಲಂಡನ್ ಏ. 12—ಸ್ಯೂಯೆಜ್ ಕಾಲುವೆಯಲ್ಲಿ ಮಿತ್ರ ಮಂಡಲಿ ನೌಕಾಗಳನ್ನು ಎದುರಿಸಲು ಬಂದಿದ್ದ 45 ಜಪಾನ್ ಬಾಂಬರ್ ಫೈಟರ್ ವಿಮಾನಗಳನ್ನು ಮಿತ್ರ ಮಂಡಲಿ ವಿಮಾನಗಳು ಎದುರಿಸಿ, 13 ಕ್ಕೆ ಹೊಡೆದುರುಳಿಸಿದುವು. ಮಿತ್ರ ಮಂಡಲಿಯವರಿಗೆ ಸ್ವಲ್ಪ ನಷ್ಟವಾಗಿದೆ.

ಇಂಗ್ಲೆಂಡಿನಲ್ಲಿ ಪ್ರಸಿದ್ಧವಾದ 5 ಸಿಗರೇಟ್ ಕಂಪನಿಗಳು ಒಟ್ಟುಪೂಡಿ ಕೆಲಸಮಾಡುವುವು. ಇವರು ತಯಾರಿಸುವ ಸಿಗರೇಟ್‌ಗಳು ಅಲ್ಲಿ ತಯಾರಾಗುವ ಸಿಗರೇಟ್‌ಗಳಲ್ಲಿ ಶೇಕಡ 80—90 ರಂತೆ.

ಡೆನ್ಮಾರ್ಕಿನಲ್ಲಿ ಚುನಾವಣೆಯಾಯಿತು. ನಾಜಿಗಳು ಶೇಕಡ ಎರಡರಂತೆ ಓಟುಗಳನ್ನು ಪಡೆದರು.

ದಕ್ಷಿಣ ಆಫ್ರಿಕಾಕ್ಕೆ ಒಂದು ತೀಲುವ ನಿಲ್ದಾಣವು ಬಂದಿದೆ. ಇದರ ಉದ್ದ 1200 ಅಡಿ ಅಗಲ 150. ಎಂಥಾ ದೊಡ್ಡ ಹಡಗೂ ಇಲ್ಲಿ ತಂಗಲು ಅನುಕೂಲವಾಯಿತು.

ಹೆಚ್ಚಾಗಿ ಬೆಳೆಯಿರಿ ಎಂದು ಎಲ್ಲರೂ ಹೇಳುವರು. ಹೆಚ್ಚಾಗಿ ಬೆಳೆದರೆ ಅದೆಲ್ಲ ರೈತನಿಗೆ ಸೇರದೆ ಸಾಹುಕಾರರ ಬಾಯಿಗೆ ಬೀಳುವುದು. ಸರ್ಕಾರದವರು ಜಮೀನು ಇಲ್ಲದ ರೈತರಿಗೆ ಜಮೀನು ಕೊಟ್ಟು ಸಹಾಯ ಮಾಡಿದರೆ ಅದರಿಂದ ಪ್ರಯೋಜನವೇ ಹೊರತು ಸುಮ್ಮನೆ ಹೆಚ್ಚಿಗೆ ಬೆಳೆಯಿರಿ ಎಂದರೆ ಏನೂ ಪ್ರಯೋಜನವಿಲ್ಲ'

ನ್ಯೂ ಯಾರ್ಕ್ 11— ದಕ್ಷಿಣ ಆಫ್ರಿಕಾದಲ್ಲಿನ ಮಿತ್ರ ಮಂಡಲಿ ಮುಖ್ಯನಾಡಿನಿಂದ ಬಂದಿರುವ ವರ್ತಮಾನ ಪತ್ರಿಕೆಯು ಅವರ ಫಂಡೋಕ್ ಕಣಿವೆಯನ್ನು ವಶಪಡಿಸಿಕೊಂಡಿರುವರು ರೊಮೆಲ್ಲನು ಸೂಸ್ ಅಜೆ ಹಿನ್ಮೆಟ್ಟಿರುವನು. ಬ್ರಿಟಿಷ್ 8 ನೇ ಪಡೆಯು ಉಶ್ಕರದ ಕಡೆಯಿಂದ ಮುಂದುವರಿಯುತ್ತಿದೆ. ರೊಮೆಲ್ಲನು ಸೂಸನ್ನು ರಕ್ಷಿಸುವಂತಿಲ್ಲ.

---

## ಭಂಗಾರ ಬೆಳ್ಳಿ ಧಾರಣೆ

| | | |
|---|---|---|
| ಸರಕ್ | ರೂ. | 55-4-0 |
| ಬಂಗಾರ ತೊಲ | ರೂ. | 77-10-0 |
| ಬೆಳ್ಳಿ | ,, | 1-2-0 |

## ಟೋಕಿಯೋದಲ್ಲಿ ಯುದ್ಧಾನಂತರ

ಕ್ಯೂಬರ್‌ನಲ್ಲಿ ಹಿಂದೆ ನಡೆದ ತೀರ್ಮಾನಕ್ಕೆ ಈಗ ಸಲ್ಲ ಹೆಚ್ಚು ವಿಷಯಗಳನ್ನು ಸೇರಿಸಿ ಒಂದು ಪ್ರಕಟನೆ ಹೊರಡಿಸಿಲಿತ್ತಾರೆ. " ಯುದ್ಧ ಸಂತರ ಮಿತ್ರ ಪಕ್ಷದ ಸೈನಿಕರು ಟೋಕಿಯೋ ನಗರವನ್ನು ಹಂಗಾಮು ಆಕ್ರಮಿಸಿಕೊಳ್ಳುವುದು. ಜಪಾನೀಯರ ಯಾವ ಆಯುಧವನ್ನೂ ಇಟ್ಟುಕೊಳ್ಳಬಾರದು. ಇವರಿಗೆ ಜಕ್ಕಾದಿಪತ್ಯವಿರಕೂಡದು. ಕೋರಿಯಾ ಮಂಚೂರಿಯಾ ಹಿಂದಿನ ಯುದ್ಧದಲ್ಲಿ ಕೊಟ್ಟಿದ್ದ ಮ್ಯಾಂಡೇಟೆಡ್ ದ್ವೀಪಗಳನ್ನು ಕಿತ್ತುಕೊಳ್ಳಬೇಕು. ಚೈನಾದವರ ಫರ್ಮೋಸ ದ್ವೀಪವು ಚೈನಾಕ್ಕೆ ವಾಪಸ್ಸು ಕೊಡಿಸಬೇಕು. ಚೈನಾದಲ್ಲಾದ ನಷ್ಟಕ್ಕೆ ಜಪಾನು ಕೂಲಿಗಾರರು ಚೈನಾದಲ್ಲಿ ಒಂದು ಕೆಲಸಮಾಡಬೇಕು. ಜಪಾನ್ಲ ತಲೆ ಎತ್ತದೆ ಯುದ್ಧಮಾಡುವ ಆಶೆಬಿಟ್ಟು ಕೌಲೇ ಒಳ್ಳಿದೆಂದು ತಿಳಿದುಕೊಳ್ಳುವ ಹಾಗೆ ಮಾಡಬೇಕಾದರು. ಲಾರ್ಡ್ ಹೇಲಿ ಹೇಳಿದರು ಹಾಂಕಾಂಗ್, ಸಿಂಗಪೂರ್ ಓಪನ್ ಪೊರ್ಟ್ ಆಗಿರಬೇಕು' ಷಾಂಗಾಯಿಂದ ಚೈನಾಕ್ಕೆ ಅನುಕೂಲವಾಗಬೇಕೆಂದರು. ಕಲೋನಿಗಳ ವಿಷಯ ಚರ್ಚೆಗೆ ಬಂದಾಗ ಲಾರ್ಡ್ ಹೇಲಿಯವರು " ಕಾಲೋನಿಗಳು ತಾವು ರಾಜಕೀಯ ಭತರ ಯೋಗ್ಯ ಇದೆಯೆಂದು ತೋರ್ಪಡಿಸಿಕೊಂಡಾಗ ಅವರಿಗೆ ಕೊಡಬಹುದೆಂದರು.

---

ಬಂಗಾಳದಲ್ಲಿ ಮುಸಲ್ಮಾನ್ ಲೀಗ್ ನವರು ಮಂತ್ರಿ ಮಂಡಲವನ್ನು ಏರ್ಪಡಿಸುತ್ತಾರೆಂದು ತಿಳಿಯಬಂದಿದೆ.

ಮಾಸ್ಕೊ ಏ. 11—ರಷ್ಯಾರಂಗದಲ್ಲಿ ತಟಸ್ಥ ಸ್ಥಿತಿಯಲ್ಲಿ ಎರಡು ಕಡೆಯವರು ಆಚ್ಚುಕಟ್ಟಾದ ಸ್ಥಳಗಳನ್ನು ಪಡೆಯಲು ಕಾರ್ಯ ನಡೆಸುತ್ತಿರುವರು.

ಲಂಡನ್ ಏ. 11—ನಿನ್ನೆ ರಾತ್ರಿ ಜರ್ಮನಿಯ ವಾಯವ್ಯ ಭಾಗದಲ್ಲಿ ಮಿತ್ರ ಮಂಡಲಿ ಧಾಳಿ ನಡೆದಿದೆ.

ಕಾರ್ಡಿಫ್ ಏ 11—ಹಿಟ್ಲರು ಕಾರ್ಯದಲ್ಲಿ ಜಯಶೀಲನಲ್ಲವಾಗಿ ತೆಗೆದು ಹಾಕಲ್ಪಡುವನೆಂದು ಸರ್ಕಾರದ ಮಾಜಿ ರಾಜಕೀಯ ಸಲಹೆಗಾರನಾದ ಲಾರ್ಡ್ ವಾನ್ಸಿಟಾರ್ಟ್ ಹೇಳಿರುವರು. ಹಿಟ್ಲರಿಂದ ಬಿಡುಗಡೆ ಪಡೆಯುವುದೇ ನಮ್ಮ ಕಾರ್ಯವಾಗಿದೆ.

ಮಿಸ್ರಗಿಲ್ಲಾ ಬಳಿ ನಾಜಿಗಳು ದೊಡ್ಡ ಯುದ್ಧ ಹೂಡಲು ನಿರ್ಧಾರಿಸಿಕೊಂಡಿರುವರು

# ಬೇಕಾಗಿದ್ದಾರೆ

ಮೈಸೂರಿನ ಎಲ್ಲಾ ಕಡೆಗಳಲ್ಲಿಯೂ ಪತ್ರಿಕೆಯನ್ನು ನೂರಲೂ, ಚಂದಾದಾರರಿಗೆ ಕೊಡಲೂ ಕೆಲವರು ಬೇಕಾಗಿದ್ದಾರೆ.

ಹೆಚ್ಚು ವಿಷಯಗಳನ್ನು ಮೊಖ್ತಾ ವಿಚಾರಿಸಿ ತಿಳಿಯಬಹುದು

ಮ್ಯಾನೇಜರ್, ಸತ್ಯವಾದಿ ಪ್ರೆಸ್
ಚಾಮರಾಜಪುರಂ, ಮೈಸೂರು.

# SHAKTI SUDHA
## A Panacea for All Debilites



ಹೆಚ್. ಆರ್. ಜಿ. ಸಿ. ಯವರ

ಶ್ರೀ ಪಿಕ್ಚರ್ಸ್ ತಯಾರಿಕೆ

ವಾಣಿ ಅಥವಾ VIOLINIST

ಎಂಬ ಕನ್ನಡ ಸಾಮಾಜಿಕ ಚಿತ್ರ

ನಿಮ್ಮ ಮನರಂಜನೆಗಾಗಿ ಬೇಗಲೇ ಬರಲಿದೆ

ಸಂಗೀತರತ್ನ ಟಿ. ಚೌಡಯ್ಯ, ಕಲ್ಚರ್ಡ್ ಕಮೆಡಿಯನ್ ಕೆ. ಹಿರಣ್ಣಯ್ಯ, ಗಾಯನಗಾಂಧರ್ವ ಚಂಪೆ ವೈದ್ಯನಾಥ ಭಾಗವತರ್ ವ್ಯಾದಂಗಪಬ್ಲಾಕ್ ಮಣಿ ಕೋಕಿಲಕಂಠ ಬಳ್ಳಾರಿ ಲಲಿತ, ಚಂದ್ರಮ್ಮ, ರತ್ನ, ಪಂಡರೀಬಾಯಿ, ಧನಭಾಗ್ಯಂ ಎ. ನಾರಾಯಣರಾವ್, ಕೆ. ಎಂ. ಮಹದೇವ್, ಮಾಸ್ಟರ್ ಬಿ. ವಿ. ಕೆ. ಮೂರ್ತಿ ಬಿ. ಎಸ್. ಸುಬ್ಬಯ್ಯ, ಎಂ. ಮಾಧವರಾವ್, ಎ. ಸುಬ್ಬಣ್ಣ, ಎಂ. ಆರ್. ಪಿ. ಸಾರಥಿ ಶ್ರೀಮತಿ ಕೆ. ಲಂ, ಶಾಂತಿರಾಜಮ್ಮ. ಮುಂತಾದವರು ತಾರಾಗಣದಲ್ಲಿದ್ದಾರೆ.

ನಿಮ್ಮ ಊರಿನ ಮೆಚ್ಚಿನ ಚಿತ್ರ ಮಂದಿರಗಳಲ್ಲಿ

ಎದುರು ನೋಡಿ

ನಿರ್ದೇಶಕರು — ಜಿ. ಆರ್. ರಾಮಯ್ಯನವರು
ಸಂಗೀತ ನಿರ್ದೇಶಕರು— ಸಂಗೀತರತ್ನ ಟಿ. ಚೌಡಯ್ಯನವರು
ತಯಾರಿಕೆ— ಸಾಹುಕಾರ್ ಟಿ ಎಸ್. ಶಿವಸವಸ್ವಾಮಿ
ಕಥಾ ಮತ್ತು ದಿಗ್ದರ್ಶಕರು— ಕೆ. ಹಿರಣ್ಣಯ್ಯ ಮತ್ತು ಎಂ. ಎಸ್ ಗೋಪಾಲ್.
ಸ್ಟೂಡಿಯೊ—ಸೆಂಟ್ರಲ್ ಸ್ಟೂಡಿಯೋಸ್ ಲಿಮಿಟೆಡ್, ಕೊಯಂಬತ್ತೂರು.



Opera ಎನೆ ಆಮೋಘ ಸಾರ Manonmani

ಅಪೇರಾ 2-4-43 ರಿಂದ

ಮನೋನ್ಮಣಿ

ಪಿ. ಯು. ಚಿನ್ನಪ್ಪ, ಟಿ ಆರ್. ರಾಜಕುಮಾರಿ, ಶ್ಯಾಮ, ಮಹಾಲಿಂಗಂ, ಕೆ.ಕೆ. ಪೆರುಮಾಳ್, ಎಸ್. ಎಸ್. ಕೃಷ್ಣಟಿ.ಎ. ಮಧುರಾ, ಕಾಳಿ ಎನ್. ರತ್ನಂ, ವಂತಾದವರು ಪಾತ್ರ ವಹಿಸಿರುವರು.

ಬೆಂಗಳೂರಿನಲ್ಲಿ .... 12 ವಾರ ನಡೆಯಿತು
ಮದರಾಸಿನಲ್ಲಿ .... ಮಧುರೆಯಲ್ಲಿ
22 ನೇ ವಾರ ನಡೆಯುತ್ತಿದೆ



Edited, Printed & published by M. S. Krishna Rao, at the Satyavadi Press. Chamaraja Agrahar, Mysore.


## ಅಮೇರಿಕಾದಲ್ಲಿ ಕೆಲಸಗಾರರ ಅಭಾವ

ಅಮೆರಿಕಾದಲ್ಲಿ ಕೆಲಸಗಾರರ ಅಭಾವದಿಂದ ಈಗಲೆ 180 ಲಕ್ಷ ಟನ್ ಹಡಗನ್ನು ಕಟ್ಟಲು ಕಷ್ಟವಾಗಿದೆ. ಶೇಕಡ 2 ರಂತೆ ಖತರ್ನಾಕಸಿಬಟ್ಟು ಸೈನ್ಯಕ್ಕೆ ಸೇರಿರುತ್ತಾರೆ. ಹೆಚ್ಚು ಕೆಲಸಮಾಡಲು ಹೆಚ್ಚು ಜನ ಬೇಕು. ಈಗಿನೇಕ ವಿಮಾನಗಳಲ್ಲಿ 262617 ಕೂಲಿಗಳಿದ್ದರೂ ಇನ್ನೂ 710 0 ಜನ ಬೇಕಾಗಿದ್ದಾರೆ.

## ರಷ್ಯಾ ಬಗ್ಗೆ ಕೃತಜ್ಞತೆ

ಯುದ್ಧ ಮುಗಿದನಂತರ ರಷ್ಯನರಿಗೆ ತಮ್ಮ ಕೃತಜ್ಞತೆ ತೋರಿಸಲುಆಂಗ್ಲೆಯರು ಅಮೆರಿಕಾದವರೂ ಸ್ಟಾಲಿನ್‌ಗ್ರಾಡ್ ನಗರವನ್ನು ಕಟ್ಟಿಕೊಡಬೇಕಂತೆ. ಹಿಂದೆ ಮಾಸ್ಕೊ ಪಟ್ಟಣವನ್ನು ಲಂಡನ್ನಿನ ಮಣ್ಣಿನಿಂದ ಕಟ್ಟಿದ್ದು ಜ್ಞಾಪಕಕ್ಕೆಬರುವುದು. ಇದು ಕಷ್ಟೆಯಲ್ಲ ಇದನ್ನು ಓದಿರಿ 1812 ರಲ್ಲಿ ಮಾಸ್ಕೊ ನಗರದ ಸಮೀಪಕ್ಕೆ ನೆಪೋಲಿಯನ್ ಬರಲು, ರಷ್ಯನರು ಭೂಮಿಯನ್ನು ಅಗೆಸು ಕಂದಕಮಾಡಿದರು. ನೆಪೋಲಿಯನ್ ನಗರಕ್ಕೆ ಬೆಂಕಿ ಹಾಕಿದನು, ವಾಟಲೂ ಕೌಲು ನಡೆದ ಮೇಲೆ ಮಾಸ್ಕೋ ನಗರವನ್ನು ಕಟ್ಟಲು ಶುರುಮಾಡಿದರು. ಮೂರು ವರ್ಷ, ಅಂದರೆ ಹತ್ತಾವರ್ತಿ ಹಿಮಗಾಲವಾಯಿತು, ಬೇಸಿಗೆ ಕಾಲವಾಯಿತು, ಇಷ್ಟಾದರೂ ಸ್ಮಶಾಣದಂತಿತ್ತೇ ವಿನಃ ಹೇಗೆ ನಗರವನ್ನು ಕಟ್ಟಬೇಕೆಂಬುದು ನಿರ್ಧರವಾಗಲಿಲ್ಲ. ರಷ್ಯಾ ಚಕ್ರವರ್ತಿಯೂ ರಷ್ಯಾ ಇರಿಜಿಯರುಗಳೂ ಯೋಚಿಸುತ್ತಲೇ ಇದ್ದರು. ಈಗ ಲಂಡನ್ ಒಳಭಾಗದಲ್ಲಿರುವ ಸೆಂಟ್‌ಪಾಲ್ ಕ್ಯಾಸ್, ಮ್ಯಾಂಚಿಸ್ಟರ್ ಸ್ಕ್ವೇರ್, ಕಿಂಗ್ಸ್ ಕ್ರಾಸ್ ಈ ಕಡೆಗಳಲ್ಲಿ ಲಂಡನ್ನಿನ ಗ್ಲೋಬ್ಬರವನ್ನು ತಂದುಹಾಕುತ್ತಿದ್ದರು. ಈ ರಾತಿಯುಬೆಟ್ಟದೋಪಾದಿಯಲ್ಲಿ ದಿನೇದಿನೆ ಬೆಳೆಯುತ್ತಾ ಬಂದಿತು. ಲಂಡನ್ ನಗರವನ್ನು ಈ ಸ್ಥಳಗಳಿಗೆ ಬಡಾವಣೆ ಮಾಡಬೇಕು ಈ ಗೊಬ್ಬರವಾಸನೆಯಿಂದ ಲಂಡನ್ ನಗರದ ಆರೋಗ್ಯ ಕೆಡುವುದಿಲ್ಲವ ಎಂದು ಲಂಡನ್ನಿನಲ್ಲಿ ಜನರು ಭೀತಿಗೊಳ್ಳುತ್ತಿದ್ದಾರೆ. ಈ ವಿಷಯವು ರಷ್ಯಾ ಚಕ್ರವರ್ತಿಗೆ ತಿಳಿದಿತು ಲಂಡನ್ನಿಗೆ ತನ್ನ ಇಂಜನಿಯರುಗಳನ್ನು ಕಳುಹಿಸಿದನು. ಲಂಡನ್ನಿನವರು ಈ ಮಣ್ಣನ್ನು ಮಾರಿದರು. ಇದನ್ನು ಕಂಡು ಈ ಮಣ್ಣಿನಿಂದಲೇ ಮಾಸ್ಕೊ ನಗರವನ್ನು ಕಟ್ಟಿದರು.


For good printing
Saraswati Printing Press
Lansdowne Buildings, Mysore
Lakshminarasimha Press
Srirampet, Mysore


॥ ಶ್ರೀ ॥

**ಸೂಚನೆ**— ಶ್ರೀರಾಮನವಮಿ ಪ್ರಯುಕ್ತ ನಾಳೆಯ ದಿವಸ ಪತ್ರಿಕೆ ಪ್ರಕಟಿಸಲ್ಪಡುವುದಿಲ್ಲ. ಶ್ರೀರಾಮ ದೇವರು ನಮ್ಮ ವಾಚಕ ಮಹಾಶಯರೆಲ್ಲರಿಗೂ ಸಕಲ ಸನ್ಮಂಗಳಗಳನ್ನುದಯಪಾಲಿಸಲೆಂದುಕೋರುತ್ತೇವೆ.

## ಗೌವರ್ನರ ಮೇಲೆ ಟೀಕೆ ಮಾಡುವುದು ತಪ್ಪಲ್ಲ.

ಬಂಗಾಳ ಮಂತ್ರಿಮಂಡಲದಲ್ಲಿದ್ದ ಡಾ! ಶ್ಯಾಮಪ್ರಸಾದ್ ಮುಖರ್ಜಿಯವರು ಕೆಲಸಕ್ಕೆ ರಾಜೀನಾಮೆ ಕೊಟ್ಟ ಕಾಲದಲ್ಲಿ ತಾವು ಗವರ್ನರಿಗೆ ಬರೆದ ಪತ್ರದಲ್ಲಿ ತಾವು ಯಾತಕ್ಕೆ ರಾಜೀನಾಮೆ ಕೊಟ್ಟ ಕಾರಣ ತಿಳಿಸಿದ್ದರು. ಈ ಪತ್ರದ ನಕಲನ್ನು ಬಂಗಾಳದ ಯಾವ ಪತ್ರಿಕೆಗಳೂ ಪ್ರಕಟಿಸಲಿಲ್ಲ, ಇದನ್ನು ಡಾಕ್ಟರ್ ಪುಸ್ತಕರೂಪವಾಗಿ ಪ್ರಕಟಿಸಿದರು. ಇವನ್ನು ಸರ್ಕಾರದವರು ಮುಟ್ಟುಗೋಲು ಹಾಕಿದರು- ಇದನ್ನೆ ಮುಂಬಯಿ " ಜನ್ಮಭೂಮಿ " ಪತ್ರಿಕೆಯು ಪ್ರಕಟಿಸಿತು. ಸರ್ಕಾರವವರು ಇವರು ಕೊಟ್ಟದ್ದ ಹಣವನ್ನು ಸರ್ಕಾರಕ್ಕೆ ಸೇರಿಸಿಕೊಂಡು ಮತ್ತೆ ಹಣವನ್ನು ಕೊಡಬೇಕೆಂದು ಕೇಳಿದರು. ವೃತ್ತ ಪತ್ರಿಕೆಯ ಮಾಲೀಕರು ಹೈ ಕೋರ್ಟಿನಲ್ಲಿದಾವಾ ಹೂಡಿರುತ್ತದೆ. ಹೈ ಕೋರ್ಟಿನ ಮೂವರು ಜಡ್ಜಿಯವರು ಕಲೆತು ವಿಚಾರಣೆ ನಡೆಸಿ ಒಬ್ಬ ಮಂತ್ರಿಯ್ಯು ಕೆಲಸಬಿಡುವಾಗ ಕಾರಣವನ್ನು ತಿಳಿಸಿ ಗವರ್ನರಿಗೂ ಮಂತ್ರಿಗಳಿಗೂ ಇರುವ ಭಾಂಧವ್ಯದ ವಿಷಯವಾಗಿ ಮಧುರ ಮಾತಿನಂಪ ಬರೆಯುವುದು ತಪ್ಪಿಲ್ಲವೆಂದು ರೇವುತ ಕೊಟ್ಟ ವೃತ್ತಪತ್ರಿಕೆಯವರು ಪ್ರಕಟಿಸಿದುದು ಸಹ ತಪ್ಪಿಲ್ಲವೆಂದರು.


ಪಿ. ಮುಂಜಪ್ಪ ಮಂಗಳೂರು ಗಣಪತಿ, ಸುವರ್ಣಾ ಗಜಾನನ ಬಿಡಿಗಳನ್ನೆ ಉಪಯೋಗಿಸಿ
ಹಳೇ-ಅಗ್ರಹಾರ, ಮೈಸೂರು.